**ಕಳೆದುಕೊಂಡಿದ್ದು ಸಣ್ಣ ಮೊತ್ತವಲ್ಲ. ಕೆ.ಜಿ.ಗಟ್ಟಲೆ ಚಿನ್ನ. ಲಕ್ಷಗಟ್ಟಲೆ ಹಣ. ಪ್ರಸಾದದ ಕುಂಕುಮ ಹಚ್ಚಿಕೊಂಡಿದ್ದಷ್ಟೇ ಗೊತ್ತು ಯಶೋದಮ್ಮನಿಗೆ. ಮುಂದೇನಾಯ್ತು ಎನ್ನುವ ಬಗ್ಗೆ ಅವರಿಗೆ ಪರಿಜ್ಞಾನವಿಲ್ಲ... ಎಚ್ಚರವಾದಾಗ 'ಅಮ್ಮಾ... ತಾಯೀ...' ಎನ್ನುತ್ತ ಕೈ ಮುಗಿದಿದ್ದರು ಯಶೋದಮ್ಮ, ತಮ್ಮನ್ನು ಉದ್ಧರಿಸಲೆಂದು ಬಂದ ಮಾರಮ್ಮ ಇನ್ನೂ ಅಲ್ಲೇ ಸ್ಥಾಪನೆಯಾಗಿದ್ದಾಳೆಂಬ ಭ್ರಮೆಯಿಂದ.**

ಇದಾನೆ ಅಂದ್ರೆ ನಾಲ್ಕಾಳು ಜೊತೆಗಿರೋ ಲೆಕ್ಕ. ಯಾರನ್ನ ಬೇಕಾದ್ರೂ ಸಿಗಿದು ಹಾಕ್ತಾನೆ...' ಅಂದಿದ್ದರು ಯಶೋದಮ್ಮ. ಅದು ಸುಳ್ಳೂ ಅಲ್ಲ. ಗುರುತಿಲ್ಲದವರು ಧೈರ್ಯ ಮಾಡಿ ಅಂಗಳಕ್ಕೆ ಕಾಲಿಟ್ಟರೆ ಹುಟ್ಟಲಿಲ್ಲ ಅನ್ನಿಸಿಬಿಡುತ್ತಾನೆ ಕೆಂಪ. ಯಶೋದಮ್ಮ ಒಳಗೆ ಹೋಗಿ ಮೊರದಲ್ಲಿ ಅಚ್ಚೇರಿನಷ್ಟು ಅಕ್ಕಿ ಹಿಡಿದು ತಂದರು. ಕಾಲುಕಾಲಿಗೆ ತೊಡರಿಕೊಳ್ಳುತ್ತಿದ್ದ ನಾಯಿಯನ್ನು ದೂರ ಅಟ್ಟಲು ನೋಡಿದರು. ಕೇಳಬೇಕಲ್ಲ ಕೆಂಪ? 'ಹಚಾ, ಹಚಾ ನಿನ್ನ ಹೊಟ್ಟೆ ಒಡಿಯ...' ಎನ್ನುತ್ತಾ ದೂರ ತಳ್ಳಲು ನೋಡಿದಷ್ಟೂ ಅದರ ಆರ್ಭಟ ಹೆಚ್ಚುಹೆಚ್ಚಾಗುತ್ತಿದೆ. ಮೊರ ಹಿಡಿದು ಉಣುಗೋಲಿನ ಹತ್ತಿರಕ್ಕೆ ಬಂದಾಗಲೇ ಅವರಿಗೆ ಗೊತ್ತಾಗಿದ್ದು, ಹೆಂಗಸಿನ ತಲೆಯ ಮೇಲೆ ಒಂದು ಬುಟ್ಟಿ ಇದೆ. ಬುಟ್ಟಿಯೊಳಗೆ ಢಾಳಾಗಿ ಅರಿಶಿನ, ಕುಂಕುಮ ಹಚ್ಚಿಕೊಂಡ ಒಂದು ಸಣ್ಣ ವಿಗ್ರಹ. ಒಂದಿಷ್ಟು ಒಣ ಹೂಗಳು. ಹಸಿರು ಬಳೆಗಳು. ಉಣುಗೋಲಿನ ಒಳಗೆ ನಿಂತೇ ಯಶೋದಮ್ಮ ನೀಡಿದ ಕೈಗೆ ಜೊತೆಯಲ್ಲಿದ್ದ ಗಂಡಸಾಗಲೀ, ದೇವರನ್ನು ಹೊತ್ತ ಹೆಂಗಸಾಗಲೀ ಜೋಳಿಗೆ ಒಡ್ಡಲಿಲ್ಲ.

"ಮಂಗಳವಾರ ಮನೆಬಾಗ್ಲಿಗೆ ಮಾರಮ್ಮ ದಯಮಾಡ್ಸಿದಾಳೆ. ಹಿಡಿ ಅಕ್ಕಿ ಕೊಟ್ಟು ಸಾಗಹಾಕ್ಬೇಡ ತಾಯೀ. ಬಾ ಅಂದ್ರೆ ಬರೋಳಲ್ಲ ಅಮ್ಮ. ಎಣ್ಣೆ ಬಂದಾಗ ಕಣ್ಣು ಮುಚ್ಕೋಬೇಡ..."

"ಕೊಡ್ತಿದೀನಲ್ಲ ಭಿಕ್ಷೆ, ತಗಂಡು ಗಾಡಿ ಬಿಡಿ..." ಅಂದರು ಯಶೋದಮ್ಮ ಬಿಗುವಾಗಿ.

"ಭಿಕ್ಷೆ ಭಿಕ್ಷೆ ಅನ್ಬೇಡ ತಾಯೀ. ನಮಗೆ ಕೊಡ್ತಿರೋದೂ ಭಿಕ್ಷೆ. ನಿಂಗೆ ಸಿಕ್ಕಿರೋದೂ ಭಿಕ್ಷೆ..."

"ಆಯ್ತಪ್ಪಾ, ಎಲ್ಲಾ ದೇವರ ಭಿಕ್ಷೇನೇ. ಸುಮ್ನೆ ಪಟ್ಟಾಂಗ ಹೊಡೀತಾ ನಿಂತ್ಕಂಬೇಡಿ. ಪುರುಸೊತ್ತಿಲ್ಲ ನಂಗೆ..."

"ಮಾತಾಡೋಕೆ ಬಂದಿದ್ದಲ್ಲ ತಾಯೀ. ಅಮ್ಮನ ಅಪ್ಪಣೆ ಆಯ್ತು, ಹುಡುಕ್ಕೊಂಡು ಬಂದ್ವಿ..."

"ಆಯ್ತಾಯ್ತು. ಭಿಕ್ಷೆ ತಗಂತೀರಾ ಇಲ್ವಾ ಹೇಳಿ..."

"ಅಮ್ಮ ಅದನ್ನೇ ಕೇಳ್ತಿದಾಳೆ. ಕೈಯೆತ್ತಿ ಕೊಡೋಕೆ ನಿನ್ನ ಮನೆಬಾಗಿಲಿಗೆ ಬಂದಿದಾಳೆ. ಬೇಕಾ, ಬೇಡ್ವಾ ಹೇಳ್ಬಿಡು ತಾಯೀ..."

ಈ ಸಲ ಮಾತಾಡಿದ್ದು ಹೆಂಗಸು. ಒಂಥರಾ ಮಾಯಕದ ದನಿ. ಚಮಕಿತರಾದರು ಯಶೋದಮ್ಮ.

"ಏನು ಕೊಡ್ತಾಳಂತೆ ನಿನ್ನ ಅಮ್ಮ?" ಉತ್ಸುಕರಾಗಿ ಕೇಳಿದರು.

"ನನ್ನ ಅಮ್ಮ, ನಿನ್ನ ಅಮ್ಮ, ಜಗತ್ತಿನ ಅಮ್ಮ, ಅವಳು ಮನಸ್ಸು ಮಾಡಿದ್ರೆ ಏನು ಕೊಡಲ್ಲ, ಹೇಳು ನೀನೇ..."

"ಅಂದ್ರೆ?"